ಮೈಸೂರು ವಿಶ್ವವಿದ್ಯಾನಿಲಯ

ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು-5

ಸಂ : ದೈ.ಶಿ.ವಿ./625/ಅಂ.ಕಾ.ಅಂ.ವ.ಪು.ಕ್ರೀ.ಕೂ./2018-2019 ದಿನಾಂಕ : 10ನೇ ಡಿಸೆಂಬರ್ 2018

E.mail-dir.deptofphyedn@gmail.com
Ph. No. 0821-2419288

ಗೆ,

ಪ್ರಾಂಶುಪಾಲರುಗಳು
ಮೈಸೂರು ವಿಶ್ವವಿದ್ಯಾನಿಲಯದ
ಸಂಯೋಜಿತ ಮತ್ತು ನಿಯೋಜಕ ಕಾಲೇಜುಗಳು

ಮಾನ್ಯರೆ,

ವಿಷಯ : 2018-2019ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜುಗಳ ಅಂತರ ವಲಯ **ಪುರುಷರ ಕ್ರೀಡಾ ಕೂಟದ ಬಗ್ಗೆ.**

* * * * *

ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜುಗಳ ಅಂತರ ವಲಯ ಪುರುಷರ ಕ್ರೀಡಾ ಕೂಟವನ್ನು **ದಿನಾಂಕ : 22-02-2019 ರಿಂದ 24-02-2019 ರವರೆಗೆ ಶಂಕರೇಗೌಡ ಶಿಕ್ಷಣ ಮಹಾವಿದ್ಯಾಲಯ, ಮಂಡ್ಯ** ಇವರ ಆಶ್ರಯದಲ್ಲಿ ನಡೆಸಲಾಗುವುದು. ಚಾಮುಂಡಿ/ಚಾಮರಾಜ/ಮಾಂಡವ್ಯ/ಮಲೆನಾಡು/ಕೃಷ್ಣರಾಜ ವಲಯಗಳ ಪಂದ್ಯಾವಳಿಗಳಲ್ಲಿ **ಕಬಡ್ಡಿ, ಬ್ಯಾಡ್‌ಮಿಂಟನ್ (ಷಟಲ್) ಹ್ಯಾಂಡ್‌ಬಾಲ್, ಬ್ಯಾಸ್ಕೆಟ್‌ಬಾಲ್, ಕ್ರಿಕೆಟ್, ಹಾಕಿ, ವಾಲಿಬಾಲ್, ಫುಟ್‌ಬಾಲ್, ಖೋ-ಖೋ, ಬಾಲ್‌ಬ್ಯಾಡ್‌ಮಿಂಟನ್, ಥ್ರೋಬಾಲ್, ಸಾಫ್ಟ್‌ಬಾಲ್, ಟೇಬಲ್ ಟೆನ್ನಿಸ್, ಚೆಸ್ ಮತ್ತು ಲಾನ್‌ಟೆನ್ನಿಸ್** ಕ್ರೀಡಾ ಸ್ಪರ್ಧೆಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ಎಲ್ಲಾ ತಂಡಗಳು ಸದರಿ ಪಂದ್ಯಾವಳಿಯಲ್ಲಿ ಭಾಗವಹಿಸಲು ಅರ್ಹತೆ ಗಳಿಸಿದ್ದು, ಅರ್ಹತೆ ಗಳಿಸಿದ ಕಾಲೇಜುಗಳ ತಂಡಗಳ ವ್ಯವಸ್ಥಾಪಕರುಗಳ ಸಭೆಯನ್ನು ದಿನಾಂಕ 21ನೇ ಫೆಬ್ರವರಿ 2019 ರಂದು ಸಂಜೆ 5-00 ಘಂಟೆಗೆ **ಶಂಕರೇಗೌಡ ಶಿಕ್ಷಣ ಮಹಾವಿದ್ಯಾಲಯ, ಮಂಡ್ಯ** ಇಲ್ಲಿ ಕರೆಯಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಡಾ. ಟಿ.ಕೆ. ರವಿ ದೈಹಿಕ ಶಿಕ್ಷಣ ನಿರ್ದೇಶಕರು, ಶಂಕರೇಗೌಡ ಶಿಕ್ಷಣ ಮಹಾವಿದ್ಯಾಲಯ, ಮಂಡ್ಯ ಇವರ **ಮೊಬೈಲ್ ಸಂಖ್ಯೆ : 9448739832** ರವರನ್ನು ಸಂಪರ್ಕಿಸಲು ಕೋರಲಾಗಿದೆ.

ವಿಶೇಷ ಸೂಚನೆ : ಕ್ರಿಕೆಟ್ ಮತ್ತು ಫುಟ್‌ಬಾಲ್ ಪಂದ್ಯಾವಳಿಯಲ್ಲಿ ವಲಯ ಮಟ್ಟದಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದ ತಂಡಗಳಿಗೆ ದಿನಾಂಕ : 20-02-2019 ರ ಬೆಳಗ್ಗೆ 8-00 ಘಂಟೆಗೆ ಪಿ.ಇ.ಎಸ್. ತಾಂತ್ರಿಕ ಮಹಾವಿದ್ಯಾಲಯದ ಕ್ರೀಡಾಂಗಣದಲ್ಲಿ ಸದರಿ ಪಂದ್ಯಾವಳಿಗಳನ್ನು ಪ್ರಾರಂಭಿಸಲಾಗುವುದು. ಸದರಿ ಪಂದ್ಯಾವಳಿಗಳಿಗೆ ಅರ್ಹತೆ ಗಳಿಸಿದ ತಂಡಗಳು ದಿನಾಂಕ : 20-02-2019 ರ ಬೆಳಗ್ಗೆ 8-00 ಘಂಟೆಗೆ ಪಂದ್ಯಾವಳಿ ನಡೆಸುವ ಅಂಕಣದಲ್ಲಿ ಹಾಜರಿರಲು ಕೋರಲಾಗಿದೆ.

ಅರ್ಹತೆ ಗಳಿಸಿದ ನಿಮ್ಮ ಕಾಲೇಜಿನ ವಿವಿಧ ತಂಡಗಳು ದಿನಾಂಕ 22ನೇ ಫೆಬ್ರವರಿ 2019ರಂದು ಬೆಳಗ್ಗೆ 8-30ಕ್ಕೆ ತಮ್ಮ ಕಾಲೇಜುಗಳ ಸಮವಸ್ತ್ರ ಧರಿಸಿ ಮತ್ತು ಕಾಲೇಜುಗಳ ಧ್ವಜದೊಂದಿಗೆ **ಪಿ.ಇ.ಎಸ್. ತಾಂತ್ರಿಕ ಮಹಾವಿದ್ಯಾಲಯ, ಮಂಡ್ಯದಲ್ಲಿರುವ** ಫುಟ್‌ಬಾಲ್ ಆಟದ ಮೈದಾನದಲ್ಲಿ ನಡೆಯಲಿರುವ ಉದ್ಘಾಟನಾ ಸಮಾರಂಭದಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳಲು ನಿರ್ದೇಶನ ನೀಡಬೇಕಾಗಿ ವಿನಂತಿ.

ಹೊರಗಡೆಯಿಂದ ಬರುವ ಕಾಲೇಜುಗಳ ತಂಡಗಳಿಗೆ 21ನೇ ಫೆಬ್ರವರಿ 2019ರ ಮಧ್ಯಾಹ್ನ 3-00 ಘಂಟೆಯಿಂದ **ಪಿ.ಇ.ಎಸ್. ಪದವಿ ಪೂರ್ವ ಕಾಲೇಜು, ಮಂಡ್ಯದಲ್ಲಿ** ವಸತಿ ಸೌಕರ್ಯವನ್ನು ಕಲ್ಪಿಸಿಕೊಡಲಾಗುವುದು. **ತಂಡಗಳಿಗೆ ವಸತಿ ಸೌಕರ್ಯ ನೀಡಲು ತಂಡಗಳ ಜೊತೆಯಲ್ಲಿ ವ್ಯವಸ್ಥಾಪಕರು ಕಡ್ಡಾಯವಾಗಿರಬೇಕು ಹಾಗೂ ವಿದ್ಯಾರ್ಥಿಗಳ ಜೊತೆಯಲ್ಲೇ ವಸತಿ ಸೌಕರ್ಯವನ್ನು ತಂಡದ ವ್ಯವಸ್ಥಾಪಕರಿಗೂ ಕಲ್ಪಿಸಲಾಗುವುದು. ಆದುದರಿಂದ ತಂಡದ ಜೊತೆಯಲ್ಲೇ ವ್ಯವಸ್ಥಾಪಕರು ಕಡ್ಡಾಯವಾಗಿರಬೇಕು.** ವಸತಿ ಸೌಕರ್ಯ ಪಡೆಯಲು ರೂ. 500-00 (ಐದುನೂರು ರೂಪಾಯಿಗಳು) ಎಚ್ಚರಿಕೆ ಹಣವನ್ನು ವಸತಿ ವ್ಯವಸ್ಥೆಯ ಅಧಿಕಾರಿಯವರಲ್ಲಿ ಸಂದಾಯ ಮಾಡಬೇಕು. ಸದರಿ ಹಣವನ್ನು ಪಂದ್ಯಾವಳಿ ಮುಗಿದ ನಂತರ ವಾಸ್ತವ್ಯದ ಸ್ಥಳದಲ್ಲಿ ಯಾವುದೇ ಹಾನಿ ಮಾಡದಿದ್ದಲ್ಲಿ ಹಿಂದಿರುಗಿಸಲಾಗುವುದು.

ಕ್ರೀಡಾಕೂಟದಲ್ಲಿ ಭಾಗವಹಿಸುವ ವಿವಿಧ ಕಾಲೇಜಿನ ಕ್ರೀಡಾ ತಂಡಗಳು ಕ್ರೀಡೆ ನಡೆಯುವ ಸಮಯದಲ್ಲಿ ಹಾಗೂ ವಸತಿ ಸೌಕರ್ಯ ಒದಗಿಸಿರುವ ಜಾಗದಲ್ಲಿ ಶಿಸ್ತು ಸಂಯಮ ಹಾಗೂ ಸಮಯ ಪಾಲನೆಗೆ ಹೆಚ್ಚು ಮಹತ್ವವನ್ನು ನೀಡಲು ಆಯೋಜಕರು ತೀರ್ಮಾನಿಸಿದ್ದು, ಇದನ್ನು ಉಲ್ಲಂಘಿಸಿದ ಕ್ರೀಡಾ ತಂಡಗಳನ್ನು ಕ್ರೀಡಾಕೂಟದಿಂದ ಹಾಗೂ ವಸತಿ ನಿಲಯದಿಂದ ಹೊರ ಹಾಕಲಾಗುವುದು. ಆದುರಿಂದ ಕ್ರೀಡಾಕೂಟದಲ್ಲಿ ಭಾಗವಹಿಸುವ ಕಾಲೇಜಿನ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನ ಕ್ರೀಡಾಪಟುಗಳಿಗೆ ಕ್ರೀಡಾಕೂಟದ ಸಮಯದಲ್ಲಿ ಶಿಸ್ತಿನಿಂದ ವರ್ತಿಸಲು ಆದೇಶಿಸಬೇಕಾಗಿ ಕೋರಿಕೆ. ಯಾವುದೇ ತಂಡ ಆಶಿಸ್ತಿನಿಂದ ವರ್ತಿಸಿದರೆ ಆ ತಂಡದ ವ್ಯವಸ್ಥಾಪಕರು/ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಕಾಲೇಜಿನ ಪ್ರಾಂಶುಪಾಲರು ಹೊಣೆಯಾಗಿರುತ್ತಾರೆ. ಮೇಲಿನ ಅಂಶವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಲು ಕೋರಲಾಗಿದೆ.

ಸದರಿ ಕ್ರೀಡಾಕೂಟದಲ್ಲಿ ಭಾಗವಹಿಸುವ ಎಲ್ಲಾ ಆಟಗಾರರು ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗ ನಿಗದಿಪಡಿಸಿರುವ ನಮೂನೆಯಲ್ಲಿ ಇತ್ತೀಚಿನ ಭಾವಚಿತ್ರದ ಮೇಲೆ ಪ್ರಾಂಶುಪಾಲರುಗಳ ಸಹಿ ಮತ್ತು ಮೊಹರು ಇರುವ **"ಗುರುತಿನ ಚೀಟಿ"**ಯನ್ನು ಕಡ್ಡಾಯವಾಗಿ ಹೊಂದಿರಬೇಕು, ಇಲ್ಲದಿದ್ದಲ್ಲಿ ಆಟಗಾರರಿಗೆ ಪಂದ್ಯಗಳಲ್ಲಿ ಭಾಗವಹಿಸಲು ಬಿಡುವುದಿಲ್ಲ.

ಮೇಲಿನ ಸೂಚನೆಗಳನ್ನು ಮತ್ತು ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಕ್ರೀಡಾ ಕಾರ್ಯನೀತಿಯ ಕೈಪಿಡಿಯಲ್ಲಿ (Sports Policy Handbookನಲ್ಲಿ) ತಿಳಿಸಿರುವ ನಿಯಮಗಳನ್ನು ತಮ್ಮ ಕಾಲೇಜಿನ ತಂಡಗಳ ವ್ಯವಸ್ಥಾಪಕರು ಹಾಗೂ ಆಟಗಾರರು ಪಾಲಿಸುವಂತೆ ತಿಳಿಸಬೇಕಾಗಿ ಕೋರುತ್ತಾ ಈ ಕ್ರೀಡಾಕೂಟದ ಯಶಸ್ಸಿಗೆ ತಮ್ಮ ಸಂಪೂರ್ಣ ಸಹಕಾರ ನೀಡಬೇಕಾಗಿ ವಿನಂತಿ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ

10/12/2018

(ಡಾ. ಪಿ. ಕೃಷ್ಣಯ್ಯ)
ನಿರ್ದೇಶಕರು

ಪ್ರತಿಗಳನ್ನು ವಂದನಾಪೂರ್ವಕವಾಗಿ :

1. ಚಾಮುಂಡಿ/ಚಾಮರಾಜ/ಮಾಂಡವ್ಯ/ಮಲೆನಾಡು/ಕೃಷ್ಣರಾಜ ವಲಯಗಳ ಸಂಚಾಲಕರುಗಳು ತಮ್ಮ ವಲಯದ ವಿವಿಧ ಕ್ರೀಡೆಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಗಳಿಸಿದ ವಲಯ ಮಟ್ಟದ ಪಂದ್ಯಾವಳಿಗಳ ಫಲಿತಾಂಶದ ಪಟ್ಟಿಯನ್ನು ನಿರ್ದೇಶಕರಿಗೆ ದಿನಾಂಕ : 20-01-2019 ರೊಳಗೆ ತಲುಪಿಸಲು ಕೋರಲಾಗಿದೆ. ಈ ಪತ್ರವನ್ನು ತಮ್ಮ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯ

ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು-5

ಸಂ : ದೈ.ಶಿ.ವಿ./624/ಅಂ.ಕಾ.ಅಂ.ವ.ಮ.ಕ್ರೀ.ಕೂ./2018-2019 ದಿನಾಂಕ : 10ನೇ ಡಿಸೆಂಬರ್ 2018

E.mail-dir.deptofphyedn@gmail.com
Ph. No. 0821-2419288

ಗೆ,

ಪ್ರಾಂಶುಪಾಲರುಗಳು
ಮೈಸೂರು ವಿಶ್ವವಿದ್ಯಾನಿಲಯದ
ಸಂಯೋಜಿತ ಮತ್ತು ನಿಯೋಜಕ ಕಾಲೇಜುಗಳು

ಮಾನ್ಯರೆ,

ವಿಷಯ: 2018-2019ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಅಂತರ ವಲಯ ಮಹಿಳಾ ಕ್ರೀಡಾ ಕೂಟದ ಬಗ್ಗೆ.

* * * * *

ದಿನಾಂಕ 14-02-2019 ರಿಂದ 16-02-2019ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜುಗಳ ಅಂತರ ವಲಯ ಮಹಿಳಾ ಕ್ರೀಡಾ ಕೂಟವನ್ನು **ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ, ಮೈಸೂರು** ಇವರ ಆಶ್ರಯದಲ್ಲಿ ನಡೆಸುತ್ತಿರುವುದಾಗಿ ತಿಳಿಸಲು ಹರ್ಷಿಸುತ್ತಾ, ದಿನಾಂಕ : 20-01-2019 ರಂದು ಪ್ರವೇಶ ಪತ್ರಗಳನ್ನು ಸ್ವೀಕರಿಸಲು ಕಡೆಯ ದಿನಾಂಕವಾಗಿರುತ್ತದೆ. ನಿಗದಿತ ಅವಧಿಯೊಳಗೆ ಲಗತ್ತಿಸಿರುವ ಪ್ರವೇಶ ಪತ್ರವನ್ನು **ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು** ಇವರಿಗೆ ಕಳುಹಿಸಬೇಕಾಗಿ ವಿನಂತಿ. ದಿನಾಂಕ : 23-01-2019 ರಂದು ಬೆಳಗ್ಗೆ 11-30ಕ್ಕೆ ನಿರ್ದೇಶಕರ ಕೊಠಡಿಯಲ್ಲಿ ತಳಕು ಪಟ್ಟಿಯನ್ನು ಹಾಕಲಾಗುವುದು.

ಹೊರಗಡೆಯಿಂದ ಬರುವ ತಂಡಗಳಿಗೆ **ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು ಜಯಲಕ್ಷ್ಮೀಪುರಂ, ಮೈಸೂರು** ಇಲ್ಲಿ ದಿನಾಂಕ : 13-02-2019 ರ ಮಧ್ಯಾಹ್ನ 3-00 ಘಂಟೆಯ ನಂತರ ಠೇವಣಿ ಹಣ ರೂ. 500/- ಪಡೆದು ವಸತಿ ಸೌಕರ್ಯವನ್ನು ನೀಡಲಾಗುವುದು ಮತ್ತು ಸದರಿ ಹಣವನ್ನು ವಾಸ್ತವ್ಯದ ಸ್ಥಳದಲ್ಲಿ ಯಾವುದೇ ಹಾನಿ ಮಾಡದಿದ್ದಲ್ಲಿ, ವಸತಿಯನ್ನು ತೆರವುಗೊಳಿಸಿದ ನಂತರ ಹಿಂದಿರುಗಿಸಲಾಗುವುದು. ಈ ಕ್ರೀಡಾಕೂಟದಲ್ಲಿ ಭಾಗವಹಿಸುವ ಎಲ್ಲಾ ತಂಡಗಳ ವ್ಯವಸ್ಥಾಪಕರುಗಳ ಸಭೆಯನ್ನು ದಿನಾಂಕ : 13-02-2019 ರಂದು ಸಂಜೆ 5-30 ಘಂಟೆಗೆ **ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ, ಮೈಸೂರು** ಇಲ್ಲಿ ಕರೆಯಲಾಗಿದೆ. ಸ್ಪರ್ಧೆಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳು ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗ ನೀಡಿರುವ ನಮೂನೆಯಲ್ಲಿ ಕ್ರೀಡಾಪಟುವಿನ ಭಾವಚಿತ್ರದ ಮೇಲೆ ಪ್ರಾಂಶುಪಾಲರ ಮೇಲು ಸಹಿ ಮತ್ತು ಮೊಹರು ಇರುವ ಗುರುತಿನ ಪತ್ರವನ್ನು ಕಡ್ಡಾಯವಾಗಿ ಹೊಂದಿರಬೇಕು ಹಾಗೂ ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿರುವ ಎಲ್ಲಾ ತಂಡದ ಕ್ರೀಡಾಪಟುಗಳು ಕಾಲೇಜಿನ ಸಮವಸ್ತ್ರ ಮತ್ತು ಕಾಲೇಜಿನ ಧ್ವಜದೊಂದಿಗೆ ದಿನಾಂಕ : 14-02-2019 ರ ಬೆಳಗ್ಗೆ 8-30 ಘಂಟೆಗೆ **ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ, ಮೈಸೂರು** ಇಲ್ಲಿ ಜರುಗಲಿರುವ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳುವಂತೆ ನಿರ್ದೇಶನ ನೀಡಬೇಕಾಗಿ ವಿನಂತಿ.

ಕ್ರೀಡಾಕೂಟದಲ್ಲಿ ಭಾಗವಹಿಸುವ ವಿವಿಧ ಕಾಲೇಜಿನ ಕ್ರೀಡಾ ತಂಡಗಳು ಕ್ರೀಡೆ ನಡೆಯುವ ಸಮಯದಲ್ಲಿ ಹಾಗೂ ವಸತಿ ಸೌಕರ್ಯ ಒದಗಿಸಿರುವ ಜಾಗದಲ್ಲಿ ಶಿಸ್ತು ಸಂಯಮ ಹಾಗೂ ಸಮಯ ಪಾಲನೆಗೆ ಹೆಚ್ಚು ಮಹತ್ವವನ್ನು ನೀಡಲು ಆಯೋಜಕರು ತೀರ್ಮಾನಸಿದ್ದು, ಇದನ್ನು ಉಲ್ಲಂಘಿಸಿದ ಕ್ರೀಡಾ ತಂಡಗಳನ್ನು ಕ್ರೀಡಾಕೂಟದಿಂದ ಹಾಗೂ ವಸತಿ ನಿಲಯದಿಂದ ಹೊರ ಹಾಕಲಾಗುವುದು. ಆದುರಿಂದ ಕ್ರೀಡಾಕೂಟದಲ್ಲಿ ಭಾಗವಹಿಸುವ ಕಾಲೇಜಿನ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನ ಕ್ರೀಡಾಪಟುಗಳಿಗೆ ಕ್ರೀಡಾಕೂಟದ ಸಮಯದಲ್ಲಿ ಶಿಸ್ತಿನಿಂದ ವರ್ತಿಸಲು ಆದೇಶಿಸಬೇಕಾಗಿ ಕೋರಿಕೆ. ಯಾವುದೇ ತಂಡ ಆಶಿಸ್ತಿನಿಂದ ವರ್ತಿಸಿದರೆ ಆ ತಂಡದ ವ್ಯವಸ್ಥಾಪಕರು/ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಕಾಲೇಜಿನ ಪ್ರಾಂಶುಪಾಲರು ಹೊಣೆಯಾಗಿರುತ್ತಾರೆ. ಮೇಲಿನ ಅಂಶವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಲು ಕೋರಲಾಗಿದೆ.

ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾ ತಂಡಗಳಿಗೆ ತಂಡದ ವ್ಯವಸ್ಥಾಪಕರು/ಕ್ರೀಡಾ ಕಾರ್ಯದರ್ಶಿಗಳು ಕ್ರೀಡಾ ತಂಡಗಳೊಡನೆ ಕಡ್ಡಾಯವಾಗಿ ಹಾಜರಿರ ತಕ್ಕದ್ದು. ವ್ಯವಸ್ಥಾಪಕರು ಇಲ್ಲದ ತಂಡಗಳನ್ನು ಕ್ರೀಡಾಕೂಟದಲ್ಲಿ ಭಾಗವಹಿಸಲು ಅನುಮತಿ ನೀಡುವುದಿಲ್ಲ.

ತಮ್ಮ ಕಾಲೇಜಿನ ತಂಡದ ವ್ಯವಸ್ಥಾಪಕರು ಮತ್ತು ಕ್ರೀಡಾಪಟುಗಳಿಗೆ ಮೇಲಿನ ಸೂಚನೆಗಳು ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ಕ್ರೀಡಾ ಕಾರ್ಯನೀತಿಯ ಕೈಪಿಡಿಯಲ್ಲಿ (Sports Policy Handbookನಲ್ಲಿ) ತಿಳಿಸಿರುವ ನಿಯಮಗಳನ್ನು ಪಾಲಿಸುವಂತೆ ತಿಳಿಸಬೇಕಾಗಿ ಕೋರುತ್ತಾ ಸದರಿ ಕ್ರೀಡಾಕೂಟವು ಯಶಸ್ವಿಯಾಗಿ ನಡೆಯಲು ತಮ್ಮ ಸಂಪೂರ್ಣ ಸಹಕಾರ ನೀಡಬೇಕಾಗಿ ವಿನಂತಿ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ

10/12/2018.

(ಡಾ. ಪಿ. ಕೃಷ್ಣಯ್ಯ)
ನಿರ್ದೇಶಕರು

ಪ್ರತಿಗಳನ್ನು ವಂದನಾಪೂರ್ವಕವಾಗಿ :

1. ಚಾಮುಂಡಿ/ಚಾಮರಾಜ/ಮಾಂಡವ್ಯ/ಮಲೆನಾಡು/ಕೃಷ್ಣರಾಜ ವಲಯಗಳ ಸಂಚಾಲಕರುಗಳು ತಮ್ಮ ವಲಯದ ವಿವಿಧ ಕ್ರೀಡೆಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಗಳಿಸಿದ ವಲಯ ಮಟ್ಟದ ಪಂದ್ಯಾವಳಿಗಳ ಫಲಿತಾಂಶದ ಪಟ್ಟಿಯನ್ನು ನಿರ್ದೇಶಕರಿಗೆ ದಿನಾಂಕ : 20-01-2019 ರೊಳಗೆ ತಲುಪಿಸಲು ಕೋರಲಾಗಿದೆ. ಈ ಪತ್ರವನ್ನು ತಮ್ಮ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ.